ಉತ್ಪಾದನೆ ಸಾಮರ್ಥ್ಯ ಹೊಂದಿದೆ. ಬಿಜಾಪುರ ಜಿಲ್ಲೆಯ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಧಾರವಾಡದಲ್ಲಿರುವ ಕೆ.ಎಂ.ಎಫ್. ಪಶು ಆಹಾರ ಘಟಕದ ಉತ್ಪಾದನಾ ಸಾಮರ್ಥ್ಯವನ್ನು ಪ್ರತಿದಿನ 150 ರಿಂದ 200 ಮೆಟ್ರಿಕ್ ಟನ್‌ಗೆ ಹೆಚ್ಚಿಸಲಾಗುತ್ತಿದೆ.

ಭವಿಷ್ಯದಲ್ಲಿ ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಪಶು ಆಹಾರದ ಬೇಡಿಕೆಯನ್ನು ತಿಳಿಯಲು ತಾಂತ್ರಿಕ ಸಮೀಕ್ಷೆ ಕೈಗೊಂಡು ಪಶು ಆಹಾರ ಘಟಕ ಸ್ಥಾಪಿಸಲು ಪರಿಶೀಲಿಸಲಾಗುವುದು.

2. ವಿಷಯ: ಜಾಗೃತ ಸಮಿತಿಗೆ ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಅಧ್ಯಕ್ಷರೆಂದು ನೇಮಿಸಲು ತೀರ್ಮಾನ ಮಾಡಿರುವ ಬಗ್ಗೆ.

ಶ್ರೀ ಸುನೀಲ್ ವಿ.ಹೆಗಡೆ (ಹಳಿಯಾಳ):- ಮಾನ್ಯ ಅಧ್ಯಕ್ಷರೆ, ಜಾಗೃತ ಸಮಿತಿಯನ್ನು ತಾಲ್ಲೂಕು ಮಟ್ಟದಲ್ಲಿ ಮಾಡಿದ್ದಾರೆ. ಈ ಸಮಿತಿಗೆ ಶಾಸಕರು ಅಧ್ಯಕ್ಷರಾಗಿರುತ್ತಾರೆ. ವಿಧಾನಪರಿಷತ್ ಸದಸ್ಯರು ಸದಸ್ಯರಾಗಿರುತ್ತಾರೆ. ಆದರೆ ಮೊನ್ನೆ ದಿವಸ ಮಾನ್ಯ ಸಚಿವರು ವಿಧಾನ ಪರಿಷತ್ತಿನಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಈ ಸಮಿತಿಗೆ ಸಹಾಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದು ಎಂದು ಹೇಳಿರುವುದು ಶಾಸಕರ ಅಧಿಕಾರವನ್ನು ಮೊಟಕುಗೊಳಿಸುವಂಥ ಪ್ರಯತ್ನವಾಗಿದೆ. ಅದೇ ರೀತಿ ಶಾಸಕರ ಸಮಿತಿಯಲ್ಲಿ ಬಹಳ ಜನ ಸಾರ್ವಜನಿಕರ ಆಕ್ಷೇಪಣೆಗಳು ಬಂದಿವೆ. ಸಮಿತಿಯಿಂದ ಸರಿಯಾದ ರೀತಿಯಲ್ಲಿ ಕೆಲಸ ಆಗುತ್ತಿಲ್ಲವೆಂದು ವಿಧಾನ ಪರಿಷತ್ತಿನಲ್ಲಿಯೂ ಆಕ್ಷೇಪಣೆಗಳನ್ನು ಮಾಡಿದ್ದಾರೆ. ಇದು ನಮ್ಮ ಶಾಸಕರ ಅಧಿಕಾರವನ್ನು ಮೊಟಕುಗೊಳಿಸುವಂತಾಗುತ್ತದೆ. ಆ ಕಾರಣದಿಂದ ಈ ಬಗ್ಗೆ ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಯಾವುದೇ ಕಾರಣದಿಂದ ಈಗಿರುವ ಪರಿಸ್ಥಿತಿಯನ್ನು ಬದಲಾವಣೆ ಮಾಡದೇ ಶಾಸಕರ ಅಧ್ಯಕ್ಷತೆಯಲ್ಲಿ ಆ ಭಾಗದ ಎಲ್ಲಿ voting power

ಇರುತ್ತದೆ. ಆ ವಿಧಾನ ಪರಿಷತ್ತಿನ ಸದಸ್ಯರಷ್ಟೇ ಆ ಜಾಗದ ಸಮಿತಿಯಲ್ಲಿ ಬರಬೇಕು. ಏಕೆಂದರೆ ಒಂದೊಂದು ಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳು ಬರುತ್ತವೆ. ಅವರ voting power ಇರುವುದು ಹಳಿಯಾಳದಲ್ಲಿ, ಜೋಯಿಡಾ ಪ್ರದೇಶದಲ್ಲಿಯೂ ಅವರು ಸದಸ್ಯರಾಗುತ್ತಾರೆ. ದಾಂಡೇಲಿ ನಗರಸಭೆಗೂ ಸದಸ್ಯರಾಗುತ್ತಾರೆ. ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ):– ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನ ಸದಸ್ಯರ ಬಗ್ಗೆ ನಮಗೆಲ್ಲರಿಗೂ ಬಹಳ ಗೌರವವಿದೆ. ವಿಧಾನ ಪರಿಷತ್ತಿನ ಸದಸ್ಯರೆಂದರೆ ಮೇಲ್ಮನೆಯವರು ಮತ್ತು ಅವರು ಬಹಳ ವಿಚಾರವಂತರು. ಈ ರಾಜ್ಯದ ಆಗು ಹೋಗುಗಳೆಲ್ಲವನ್ನೂ ಯೋಜನೆ ಮಾಡಿ ವಿಧಾನ ಪರಿಷತ್ತಿನಲ್ಲಿ ತೀರ್ಮಾನ ಮಾಡಿ ನಮಗೆ ಅವರ ಸಲಹೆಯನ್ನು ಕೊಡುವಂಥ body ಆಗಬೇಕು ಎಂಬುದು ಈ ರಾಜ್ಯದ ಕಲ್ಪನೆ. ಅದು ಮಾರ್ಗದರ್ಶನ ಸಮಿತಿಯಾಗಿರಬೇಕು. ಆದರೆ ಏತಕ್ಕೋ ನಮ್ಮ ವಿಧಾನ ಪರಿಷತ್ತಿನ ಸದಸ್ಯರು ಕೇಳಿದ್ದಾರೆಯೋ, ಬಿಟ್ಟಿದ್ದಾರೆಯೋ ಗೊತ್ತಿಲ್ಲ, ಆದರೆ ಈ ಪ್ರಸ್ತಾಪ ಬಂದಿದೆ. ವಿಧಾನ ಪರಿಷತ್ತಿನವರನ್ನು ಎಲ್ಲಾ ಮನೆಗಳಿಗೆ ಛೇರ್ಮನ್ ಮಾಡುತ್ತೇವೆ ಇಲ್ಲವೇ ಗ್ರಾಮೀಣಾಭಿವೃದ್ಧಿಗೆ ಛೇರ್ಮನ್ ಮಾಡುತ್ತೇವೆ. ದಿನನಿತ್ಯದ ಕಾರ್ಯಕ್ರಮಗಳಲ್ಲಿ ಅವರನ್ನು ತೊಡಗಿಸಿಕೊಳ್ಳುವುದಾದರೆ ಅವರು ಸಹ ಎಂ.ಎಲ್.ಎ.ಗಳಾಗಿ ಬಿಡುತ್ತಾರೆ. ಅವರು ವಿಧಾನ ಪರಿಷತ್ತಿನ ಸದಸ್ಯರು, ಮೇಲ್ಮನೆಯವರು ಎಂಬ ಖ್ಯಾತಿಗೆ ಎಲ್ಲೋ ಒಂದು ರೀತಿ ಚ್ಯುತಿ ತರಬಹುದು ಎಂದೆನಿಸುತ್ತಿದೆ. ಹಾಗಾಗಿ ಮೇಲ್ಮನೆಯವರನ್ನು ನಾವು ಗೌರವದಿಂದ ಬಹಳ ಮೇಲೆ ಎತ್ತರಕ್ಕೆ ನೋಡೋಣ, ಅವರನ್ನು ಕೆಳಕ್ಕೆ ನೋಡುವುದು ಬೇಡ. ಅವರು ಯಾವಾಗಲೂ ಈ ಕೆಳಗಿನ ದಿನನಿತ್ಯ ವ್ಯವಹಾರದೊಳಗೆ ಅವರು ಕೈ ಆಡಿಸುವಂಥದ್ದು ಅಷ್ಟು ಸೂಕ್ತವಲ್ಲ. ಅವರು ನಾವೆಲ್ಲಾ ಗೌರವಿಸಿ ಹೇಳುವಂಥ ವ್ಯಕ್ತಿತ್ವ ಇರುವವರು ನಮಗೆ ಗೌರವ ಮಾರ್ಗದರ್ಶನ ನೀಡುವಂತಹ ವ್ಯಕ್ತಿಗಳಾಗಲಿ ಎಂಬುದು ನನ್ನ ಆಶಯವಾಗಿದೆ.

ಅಧ್ಯಕ್ಷರು:– ಆಯಿತು. ಸಚಿವರು ಉತ್ತರ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಆ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಸವಾಗಿರತಕ್ಕಂಥ ವಿಧಾನ ಪರಿಷತ್ತಿನ ಸದಸ್ಯರು ಕೂಡ ಈ ಜಾಗೃತ ಸಮಿತಿ ಸದಸ್ಯರಾಗಿದ್ದಾರೆ. ವಿಧಾನ ಪರಿಷತ್‌ನಲ್ಲಿರುವ ಸದಸ್ಯರು ನಮ್ಮನ್ನು ಕೂಡ ಸಹಾಧ್ಯಕ್ಷರು ಎಂದು ಪರಿಗಣಿಸಿ, ಸದಸ್ಯರೆಂದು ಪರಿಗಣಿಸಬಾರದೆಂದು ಮೇಲ್ಮನೆ ಸದಸ್ಯರ ಕೋರಿಕೆಯಿತ್ತು. ಅದಕ್ಕೆ ಆ ಸಂದರ್ಭದೊಳಗೆ ಸರ್ಕಾರ ಮೇಲ್ಮನೆಯಲ್ಲಿ ಅವರನ್ನು ಸಹಾಧ್ಯಕ್ಷರನ್ನಾಗಿ ಪರಿಗಣಿಸುತ್ತೇವೆಂದು ಒಂದು ಹೇಳಿಕೆಯನ್ನು ಕೊಟ್ಟಿದೆ. ಇದಕ್ಕೆ ವ್ಯಕ್ತಪಡಿಸಿರುವ ಅಭಿಪ್ರಾಯ ಬಹುಶಃ ವಿಧಾನ ಸಭೆಯಲ್ಲಿರುವ ಎಲ್ಲಾ ಸದಸ್ಯರ ಅಭಿಪ್ರಾಯವಾಗಿದೆ. ಕೇವಲ ಸುನಿಲ್ ಹೆಗಡೆಯವರ ಒಬ್ಬರದೇ ಅಭಿಪ್ರಾಯವಲ್ಲ. ಇಲ್ಲಿರುವ ವಿರೋಧ ಪಕ್ಷದ ನಾಯಕರು, ಮಂತ್ರಿಗಳು ಸೇರಿದ ಅಭಿಪ್ರಾಯವಾಗಿದೆ. ಏಕೆಂದರೆ ಶಾಸಕರ ಒಂದು ಕಾರ್ಯಕ್ಷೇತ್ರದೊಳಗೆ ಹಸ್ತಕ್ಷೇಪ ಬೇರೆಯವರು ಮಾಡಬಾರದೆಂದು ಎಲ್ಲರ ಅಭಿಪ್ರಾಯವಾಗಿದೆ. ಅದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾಡುವುದಿಲ್ಲವೆಂದು ಹೇಳಿಬಿಡಿ, ಪರಿಗಣಿಸುತ್ತೇವೆ, ಪರಿಶೀಲಿಸುತ್ತೇವೆ ಎಂದು ಹೇಳಬಾರದು. ಶಾಸಕರ ಪ್ರಶ್ನೆ ಬಂದಾಗ ನಾವು ಮಾಡುವುದಿಲ್ಲವೆಂದು ಹೇಳಬಿಡಿ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು):– ಈ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ, ಅದನ್ನು ಮಾಡುವುದಿಲ್ಲವೆಂದು ಹೇಳಿ. ನಿಮ್ಮ ಉತ್ತರ specific ಆಗಿ ಇರಬೇಕಲ್ಲವೇ? ಸರ್ಕಾರ ಉತ್ತರ ಕೊಡುವಾಗ ಗಂಭೀರವಾಗಿ ಪರಿಗಣಿಸುತ್ತೇವೆ, ಪರಿಶೀಲನೆ ಮಾಡುತ್ತೇವೆಂದರೆ ಅದು ಸರ್ಕಾರದ ಉತ್ತರವಾಗುವುದಿಲ್ಲ.

ಅಧ್ಯಕ್ಷರು:– ಹೌದು. ಈಗಿನ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಿಲ್ಲವೆಂದು ಹೇಳಿಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನೂ ಸಹ ಶಾಸಕನಿದ್ದೇನೆ. ನೀವು ಅರ್ಥ ಮಾಡಿಕೊಳ್ಳಿ. ಎಂ.ಎಲ್.ಸಿ.ಗಳು ಈ ಸಮಿತಿಯಲ್ಲಿ ಸಹಾಧ್ಯಕ್ಷರಾಗಿ ಇರಬಾರದೆಂದು ನನ್ನ ವೈಯಕ್ತಿಕ ಅಭಿಪ್ರಾಯ ಕೂಡ ಆಗಿದೆ. ಮೇಲ್ಮನೆಯೊಳಗೆ ಅದು commitment ಆಗಿದೆ. ಹಾಗಾಗಿ ಅದನ್ನು ಯಾವ ರೀತಿ ಸರಿಪಡಿಸಬೇಕೋ ಆ ರೀತಿ ಸರಿಪಡಿಸುತ್ತೇವೆ.

ಅಧ್ಯಕ್ಷರು:– ಇಲ್ಲ, ಅದು ಬೇಡ.

ಶ್ರೀ ಅಭಯ ಚಂದ್ರ ಜೈನ್:– ನೀವು ಸೀನಿಯರ್ ಇದ್ದೀರಿ. Floor leader ಇದ್ದೀರಿ, ತಾವು ಹೇಳಬಹುದು.

ಶ್ರೀ ಗೋವಿಂದ ಎಂ. ಕಾರಜೋಳ:– ನಾವು ಮಾಡುತ್ತೇವೆ ಬಿಡಿ ಸರ್.

ಶ್ರೀ ಸಿದ್ದರಾಮಯ್ಯ:– Floor leader ಪರವಾಗಿ leader ಹೇಳಿದರೆ ಆಯಿತು. No, No, Leader of the House ನೀವು ಉತ್ತರ ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):– ಅವರು ಹೇಳಿರುವಂತೆ ನಾನು ಸೋಮಣ್ಣನವರ ಹತ್ತಿರ ಕೇಳಿಲ್ಲ. ಸೋಮಣ್ಣನವರ ಹತ್ತಿರವೇ ಒಂದು clarification ಪಡೆದು ಯಾವುದೇ ರೀತಿಯಿಂದ ಚುನಾಯಿತರಾಗಿರುವ ಶಾಸಕರು ಇದ್ದಾರೆ. ಕ್ಷೇತ್ರ ಶಾಸಕರ ಹಕ್ಕಿಗೆ ತೊಂದರೆ ಬರದ ಹಾಗೆ ನಾವು ನೋಡಿಕೊಳ್ಳುತ್ತೇವೆ. ಕ್ರಮ ಕೈಗೊಳ್ಳುತ್ತೇವೆ. ಇನ್ನೇನು ಹೇಳಲಿ? ಅವರು ಇವತ್ತು ಅಧ್ಯಕ್ಷರು....

SRI SIDDARAMAIAH:- This is a very very intelligent answer.

SRI S. SURESHKUMAR:- Definitely Not. Very sincere...

SRI SIDDARAMAIAH:- It is very simple. Mr. Sureshkumar, I am not finding fault in you. My Point is,

ಸೋಮಣ್ಣನವರು ಯಾವ ಕಾರಣಕ್ಕೆ ಹೇಳಿದರೋ ನಮಗೆ ಗೊತ್ತಿಲ್ಲ. ಹೊಸದಾಗಿ ಏನನ್ನೂ ಮಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು:– ಅಷ್ಟೆ.

ಶ್ರೀ ಎಸ್. ಸುರೇಶ್ ಕುಮಾರ್:– ಹೌದು, ಸೋಮಣ್ಣನವರು ಯಾವ ಕಾರಣಕ್ಕೆ ಹೇಳಿದ್ದಾರೋ ಗೊತ್ತಿಲ್ಲ.

ಶ್ರೀ ಸಿದ್ದರಾಮಯ್ಯ:– ಈಗ ಜನಗಳಿಂದ ಚುನಾಯಿತರಾಗಿ ಓಟು ತೆಗೆದುಕೊಂಡು ಬಂದಿರುವ ಶಾಸಕರಿರುವಾಗ ನಾನು ಎಂ.ಎಲ್.ಸಿ.ಗಳಿಗೆ ಅಗೌರವ ತೋರಿಸಬೇಕೆಂದು ಹೇಳುವುದಿಲ್ಲ. ಈಗ ಯಾವ ಪದ್ಧತಿ ಇದೆ, ಅದು ಮುಂದುವರೆಯಲಿ ಅಷ್ಟೇ. ಅದನ್ನು ಬಿಟ್ಟು ಮಾಡುವುದಕ್ಕೆ ಏನು ದೊಡ್ಡ ವಿಚಾರವಲ್ಲ.

ಅಧ್ಯಕ್ಷರು:– ಹೌದು. ಅದೇ ಪದ್ಧತಿ ಮುಂದುವರೆಯಲಿ ಅಷ್ಟೇ.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿಕೊಟ್ಟ ಹಾಗೆ ನಾನು ಹೇಳುತ್ತೇನೆ. ಈಗಿರುವ ವ್ಯವಸ್ಥೆಯನ್ನೇ ಮುಂದುವರೆಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ಇರುವ ವ್ಯವಸ್ಥೆಯನ್ನು ಮುಂದುವರೆಸುತ್ತಾರೆ. ಇದರಲ್ಲಿ ಇನ್ನೂ ಬದಲಾವಣೆ ಮಾಡಿಲ್ಲ.

3. ವಿಷಯ: ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ದಿನಗೂಲಿ ಆಧಾರದ ಮೇಲೆ ಅನೇಕ ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದ ಅಡುಗೆ ಸಹಾಯಕರನ್ನು ಕೆಲಸದಿಂದ ವಿಮುಕ್ತಗೊಳಿಸಿ ಹೊರಗುತ್ತಿಗೆ ಆಧಾರದ ಮೇಲೆ ಹೊಸದಾಗಿ ನೇಮಕಾತಿ ಮಾಡಿಕೊಳ್ಳುವ ಸರ್ಕಾರದ ನಿರ್ಧಾರದಿಂದ ಬಡವರು ಬೀದಿಪಾಲಾಗಿರುವುದರ ಬಗ್ಗೆ.